


# ಕಿರುತೆರೆಯಲ್ಲಿ ಚಂಡಮಾರುತ!

**ಸುದೀಪ್, ಪುನೀತ್, ದರ್ಶನ್ ಅವರು ಒಟ್ಟಾಗಿ ಅಭಿನಯಿಸಿದ ಧಾರಾವಾಹಿಯೊಂದು ಹೊಸ ವಾಹಿನಿಯ ಆರಂಭದ ದಿನದಿಂದಲೇ ಪ್ರಸಾರ ಆರಂಭಿಸಲಿದ್ದು, ಈ ಧಾರಾವಾಹಿ ಭಾರತೀಯ ದೃಶ್ಯಮಾಧ್ಯಮ ಕ್ಷೇತ್ರದಲ್ಲಿ ಹೊಸ ಇತಿಹಾಸ ಸೃಷ್ಟಿಸಲಿದೆ.**

ಸುದ್ದಿ ವಾಹಿನಿಗಳಲ್ಲಿ 'ಬ್ರೇಕಿಂಗ್ ನ್ಯೂಸ್' ಹೆಸರಿನಲ್ಲಿ ಪ್ರತಿ ಕ್ಷಣವೂ ಸುದ್ದಿಗಳು ಸ್ಫೋಟಗೊಳ್ಳುತ್ತವೆ. ಈವರೆಗೆ ಎಲ್ಲಿಯೂ 'ಬ್ರೇಕ್' ಆಗದ, ಕಿರುತೆರೆಯನ್ನು ಚಂಡಮಾರುತದಂತೆ ಅಪ್ಪಳಿಸಬಹುದಾದ ಸುದ್ದಿಯೆಂದರೆ – ಕನ್ನಡ ಚಿತ್ರರಂಗದ ಮೂವರು ಖ್ಯಾತನಾಮ ನಾಯಕರು ಬಂಡವಾಳ ಹೂಡಿ ಮನರಂಜನಾ ವಾಹಿನಿಯೊಂದನ್ನು ಆರಂಭಿಸುತ್ತಿರುವುದು.

ಪುನೀತ್ ರಾಜ್‌ಕುಮಾರ್, ದರ್ಶನ್ ಹಾಗೂ ಸುದೀಪ್ ಈ ಮೂವರು ಖ್ಯಾತನಾಮರು. ಚಿತ್ರರಂಗದಲ್ಲಿ ತಮ್ಮದೇ ಆದ ಬೃಹತ್ ಅಭಿಮಾನಿ ಸಮೂಹವನ್ನು ಹೊಂದಿರುವ ಈ ನಾಯಕರು, ಕಿರುತೆರೆಯ ಮೂಲಕ ಒಗ್ಗೂಡುತ್ತಿರುವುದು ಕನ್ನಡ ಪ್ರೇಕ್ಷಕರ ಪಾಲಿಗೆ ನಿಜವಾದ ಬ್ರೇಕಿಂಗ್ ಹಾಗೂ ಶಾಕಿಂಗ್ ಸುದ್ದಿಯೇ ಸರಿ.

ತ್ರಿಮೂರ್ತಿಗಳ ಹೊಸ ವಾಹಿನಿ ಸಾಹಸದ ಬಗ್ಗೆ 'ಸುಧಾ' ವರದಿಗಾರರು ಸುದೀಪ್ ಅವರನ್ನು ಸಂಪರ್ಕಿಸಿದಾಗ ಅವರು ಸುದ್ದಿಯನ್ನು ಖಚಿತಪಡಿಸಿದರು.

'ನಾವು ಮೂವರು ಗೆಳೆಯರು ಎಂಟರ್‌ಟೈನ್‌ಮೆಂಟ್ ಚಾನಲ್ ಆರಂಭಿಸುತ್ತಿರುವುದು ನಿಜ. ಕಳೆದೊಂದು ವರ್ಷದಿಂದ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ. ಸದ್ಯದಲ್ಲೇ ಸಿಹಿ ಸುದ್ದಿಯೊಂದಿಗೆ ನಿಮ್ಮೆದುರು ಬರಲಿದ್ದೇವೆ' ಎಂದರು. ಏಕತಾನತೆಯ ಧಾರಾವಾಹಿಗಳು ಹಾಗೂ ರಿಯಾಲಿಟಿ ಶೋಗಳಿಂದ ಮಂಕಾಗಿರುವ ಕನ್ನಡ ಕಿರುತೆರೆ ಕ್ಷೇತ್ರದಲ್ಲಿ ಸಂಚಲನ ಉಂಟುಮಾಡುವ ಉತ್ಸಾಹ ಸುದೀಪ್ ಧ್ವನಿಯಲ್ಲಿ ಇಣುಕುತ್ತಿತ್ತು.

ಬಲ್ಲ ಮೂಲಗಳ ಪ್ರಕಾರ ಬರುವ ಯುಗಾದಿ ಹಬ್ಬದ ದಿನ (ಏಪ್ರಿಲ್ 6) ಇಲ್ಲವೇ ಏಪ್ರಿಲ್ 24ರ ರಾಜಕುಮಾರ್ ಜನ್ಮದಿನದಂದು ಹೊಸ ವಾಹಿನಿ ಪ್ರಸಾರ ಆರಂಭಿಸಬೇಕಾಗಿತ್ತು. ಆದರೆ, ಚುನಾವಣಾಜ್ವರದ ಸಂದರ್ಭ ಮನರಂಜನಾ ವಾಹಿನಿಯ ಆರಂಭಕ್ಕೆ ಸರಿಯಾದ ಸಂದರ್ಭ